ತಾರೀಖು 16ನೆ ಮಾರ್ಚ 1907.

ನಂ. ರೆ. 8404-ಲ್ಯಾ. ರೆ. 477-06—3, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀರ್ಷ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸಂಸ್ಥಾರಿ ಕೆಲಸಕ್ಕೆ ಎಂದರೆ, ಮರಹಮ್ಮತ್ತು ಇಲಾಖೆಯವರು ಗ್ರಾವೆಲ್ ತೆಗೆದುಕೊಳ್ಳುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೃಷ್ಣರಾಜಪೇಟೆ ಸಬ್ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನಿನ ಒಡೆಯರು ಅಥವಾ ಜೀವದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಾಗಮಂಗಲ	ಹೊನಕರೆ	ಕೋಣನೂರು	1. ಕೃಷ್ಣಬಿಟ್ ಹೊನ್ನ, 2. ತಿಪ್ಪರ, 3. ಪೂರಣ್ಣ, 4. ಕೃಷ್ಣ.	ಸರ್ವೆ ನಂಬರು 1ರ ಪೈಕಿ 1ನೆ ಭಾಗ	ಖುಷ್ಕಿ	ಎ. ಗು. 1 39	ರೂ. ಆ. 2	ಎ. ಗು. 0 17	...	ಹೈರೋಣು	ತಿಪ್ಪರಗೊಡನ ಜಮೀನು "	ಪೂರಣ ನ ಜಮೀನು	ಜೀನ್ನ ಹೊರಗಣ ಜಮೀನು

ತಾರೀಖು 26ನೆ ಮಾರ್ಚ 1907.

ನಂ. ಆರ್. 8808—ಎಲ್. ಆರ್. 499-06—2, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸಂಸ್ಥಾರಿ ಕೆಲಸಕ್ಕೆ ಎಂದರೆ, ಬೆಂಗಳೂರಿನಲ್ಲಿ ಲಾ ಕೋರ್ಟುಗಳಿಗೋಸ್ಕರ ಒಂದು ಹೊಸ ಕಟ್ಟಡವನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಕಂದಾಯ.		ಚತುರ್ಗಡಿ.			
						ವಿಸ್ತೀರ್ಣ.				ಪೂರ್ವ.	ಪಶ್ಚಿಮ ಮತ್ತು ನೈರುತ್ಯ	ಉತ್ತರ.	ದಕ್ಷಿಣ.
						ಎ.	ಗು.	ರೂ.	ಆ.				
ಬೆಂಗಳೂರು	ಬೆಂಗಳೂರು	...	ಸಂಪಿಗೆಹಳ್ಳಿ	ಜೆ. ವಿ. ಕೃಷ್ಣಮೂರ್ತಿ, ಖಾತೆದಾರರು ಹೆ. ಸಿ. ಜಿ.	105	3	13	4	8	ಸಿನೋಟಾಫ್ ಲಘನ ಮತ್ತು ರಸ್ತೆ	ಡಿಸ್ಪೆನ್ಸರಿಯ ಪಶ್ಚಿಮ	ಅವಿನ್ಯೂ ರಸ್ತೆ	ಸಂಪಿಗೆಹಳ್ಳಿಯ ದಕ್ಷಿಣ
					106	9	23	11	0				
					107	1	5	7	8				
					109	0	3	0	4				
					110	4	2	1	12				
						18	6	25	0				

ತಾರೀಖು 19ನೆ ಮಾರ್ಚ 1907.

ನಂ. ರೆ. 8602—ಲ್ಯಾ. ರೆ. 479-06—3, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸಂಸ್ಥಾರಿ ಕೆಲಸಕ್ಕೆ, ಎಂದರೆ, ತರೀಕೆರೆ ತಾಲ್ಲೂಕು ಬೆಳೇನಹಳ್ಳಿ ಮತ್ತು ಪೆರಮೇನಹಳ್ಳಿ ಗ್ರಾಮಗಳ ದನಗಳು ತಿರುಗಾಡಲು ದಾರಿ ಮಾಡುವು

ದಕ್ಕೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನೆನುಸರಿಸಿ ತದೇಕರೆ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜವಾನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಜಿಲ್ಲೆಯ	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು. ಖುಷ್ಕಿ, ತರಿ ಯಾ ಬಾಗಾಯತ.	ಒಟ್ಟು ವಿಸ್ತೀರ್ಣ		ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗು.	ರೂ. ಆ.	ಎ. ಗು.					
ಕಡೂರು.	ತರೀಕೆರೆ.	ಶಿವನಿ.	ಬೆಳೀನಹಳ್ಳಿ.	ಚೆಂದಯ್ಯ ಬಿ॥ ಮಲ್ಲಯ್ಯ.	27 ಖುಷ್ಕಿ.	1 14	1 14	0 4		ರೈಲ್ವೆ ಗೇಟು.	ಬೆಳೀನಹಳ್ಳಿ ಗ್ರಾಮ.	ಸರ್ವೆ 27ನೆ ನಂಬರು.	ಸರ್ವೆ 27ನೆ ನಂಬರು.
				ಡಿಟೋ.	24 ಡಿಟೋ.	3 16	2 8	0 15		ಬೆಳೀನಹಳ್ಳಿ ಗ್ರಾಮ.	ರೈಲ್ವೆ ಗೇಟು.	ರುದ್ರಯ್ಯ ಬಿ॥ ನಂಜೈಯ್ಯನ ಜಮೀನು.	ಸರ್ವೆ 26ನೆ ನಂಬರು.
				ಕೂಡ್ಲಿ ಮಠದ ವಹಿವಾಟದಾರ ಸುಬ್ಬಣ್ಣಾಚಾರ್.	15 ಡಿಟೋ.	12 29	8 0	0 19		ಶಿವಮೊಗ್ಗೆಗೆ ಹೋಗುವ ಭಾಟೂ ನಮಾರ್ಗ.	ಪೆರಮೇನಹಳ್ಳಿ ಗ್ರಾಮ.	ಶಿವಮೊಗ್ಗೆಗೆ ಹೋಗುವ ಭಾಟೂಮಾರ್ಗ.	ಪೆರಮೇನಹಳ್ಳಿ ಗ್ರಾಮ.

ತಾರೀಖು 30ನೆ ಮಾರ್ಚ 1907.

ನಂ. ರೆ. 8922—ಲ್ಯಾ. ರೆ. 494—06—2, ಶ್ರೀನಿವಾಸಪುರ, ತಾಲ್ಲೂಕಿನ ಅಮಲ್ದಾರ್ ಮಿ॥ ಎಸ್. ವೆಂಕಟರಮಣಶಾಸ್ತ್ರಿಗಳಿಗೆ, ಮೈಸೂರು ಸರ್ವಿಸ ರಗ್ಯುಲೇಷನ್ಸಗಳ 177ನೆ ನಿಬಂಧನೆಯ ಮೇರೆ, 2 ತಿಂಗಳವರೆಗೆ ಪ್ರಿವಿಲೇಜ್ ರಜಾವನ್ನು ಅವರು ಉಗಯೋಗಿಸಿಕೊಳ್ಳುವ ತಾರೀಖಿನಿಂದ ಕೊಟ್ಟಿದೆ.

2. ಮಿ॥ ವೆಂಕಟರಮಣ ಶಾಸ್ತ್ರಿಗಳು ರಜಾಮೇಲೆ ಇರುವ ವರೆಗೆ ಅಥವಾ ಮತ್ತೊಂದು ಹುಕುಂ ಕೊಡುವ ವರಗೆ, ಬೆಂಗಳೂರು ಡಿಸ್ಟ್ರಿಕ್ಟ್ ಶಿರಸ್ತೆದಾರ್ ವೈ. ನರಸಿಂಗರಾಯರನ್ನು, ಶ್ರೀನಿವಾಸಪುರ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡಲು ಮೊಕರರ್ರುಡಿದೆ.

ತಾರೀಖು 1ನೆ ಏಪ್ರಿಲ್ 1907.

ನಂ. ಫೈ. 7425—ಜಿ. ಫೈ. 101—06—8, ಕಂಟೋಲರಿಗೆ ಚೀಫ್ ಅಸಿಸ್ಟೆಂಟ್‌ರಾದ ಮಿ॥ ಟಿ. ವೈದ್ಯನಾಥ ಶೆಟ್ಟರಿಗೆ 1905ನೆ ಇಸವಿಯ ನವೆಂಬರ್ ಬಂದನೆ ತಾರೀಖಿನ ಫೈ. 2806 ಜಿ. ಫೈ. 21—05—7ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಖಾಸಿಗೆ ಕೆಲಸಗಳ ಬಗ್ಗೆ ಕೊಡಲ್ಪಟ್ಟ 35 ದಿವಸಗಳ ರಜಾವನ್ನು ಮೈಸೂರು ಸರ್ವಿಸ್ ರಗ್ಯುಲೇಷನ್‌ಗಳ 154ನೆ ಪ್ರಕರಣದ ಮೇರೆಗೆ ವೈದ್ಯರ ಸರ್ಟಿಫಿಕೇಟಿನ ಮೇಲೆ ಕೊಟ್ಟ ರಜಾವಾಗಿ ಬದಲಾಯಿಸಿ ಇದೆ.

2. ಮಿ॥ ವೈಯಾಪುರಿ ಶೆಟ್ಟರಿಗೆ ಮೈಸೂರು ಸರ್ವಿಸ್ ರಗ್ಯುಲೇಷನುಗಳ 207ನೆ ಪ್ರಕರಣದ ಮೇರೆಗೆ ಖಾಸಿಗೆ ಕೆಲಸಗಳ ಬಗ್ಗೆ 1907ನೆ ಇಸವಿಯ ಜನವರಿ 12ನೆ ತಾರೀಖಿನಿಂದ ಮೂರು ತಿಂಗಳವರೆಗೆ ರಜಾ ಕೊಟ್ಟಿರುತ್ತದೆ; 1907ನೆ ಇಸವಿಯ ಜನವರಿ 31ನೆ ತಾರೀಖಿನ ಫೈ. 5983—ಜಿ. ಫೈ. 101—06—6ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಅವರಿಗೆ ಕೊಟ್ಟ ಬಂದು ತಿಂಗಳ ಪ್ರಿವಿಲೇಜ್ ರಜಾವನ್ನು ಖಾಸಿಗೆ ಕೆಲಸಗಳಿಗೆ ಕೊಟ್ಟ ರಜಾವಾಗಿ ಬದಲಾಯಿಸಿ ಇದೆ.

3. ಮಿ॥ ವೈಯಾಪುರಿ ಶೆಟ್ಟರು ರಜಾದ ಮೇಲೆ ಸೈರಿಹಾಜರಾಗುವ ಕಾಲದಲ್ಲಿ, ಕಂಟ್ರೋಲರ ಕಛೇರಿಯ ಸೀನಿಯರ್ ಎಗ್ಜಾಮಿನರ್ ಮಿ॥ ಜೆ. ವಾಟರ್‌ಫೈಯವರು ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟರಾಗಿ ಕೆಲಸ ನೋಡತಕ್ಕದ್ದು.

ತಾರೀಖು 2ನೆ ಏಪ್ರಿಲ್ 1907.

ನಂ. ಫೈ. 7437—ಎಸ್. ಆರ್. 18—06—07, ಎಕ್ಸೈಜ್ ಇಲಾಖೆ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ. ರಂಗರಾಯರಿಗೆ ಮೈಸೂರು ಸಿವಿಲ್ ಸರ್ವಿಸ್ ರಗ್ಯುಲೇಷನುಗಳ 177ನೆ ಪ್ರಕರಣಾನುಸಾರವಾಗಿ 1907ನೆ ಇಸವಿಯ ಮಾರ್ಚ್ 20ನೆ ತಾರೀಖು ಲಾಗಾಯ್ತು ಎರಡು ವಾರಗಳ ರಜಾ ಕೊಟ್ಟಿರುತ್ತದೆ.

ತಾರೀಖು 2ನೆ ಏಪ್ರಿಲ್ 1907.

ನಂ. ರೆ. 8963—ಲ್ಯಾ. ರೆ. 318-06—6, 1906ನೆ ಇಸವಿಯ ಡಿಸೆಂಬರ್ 18ನೆ ತಾರೀಖಿನ ರೆ. 6104—ಲ್ಯಾ. ರೆ. 318—06—3ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ॥ ಸಿ. ವೆಂಕಟರಾಯರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೇಜ್ ರಜಾವಿನ ಜತೆಗೆ ಮೈಸೂರು ಸರ್ವಿಸ್ ರಗ್ಯುಲೇಷನ್ಸಗಳ 155ನೆ ನಿಬಂಧನೆಯ ಮೇರೆ ಮೂರು ತಿಂಗಳ ಫರ್ಲೊ ರಜಾವನ್ನು ಸೇರಿಸಿಕೊಟ್ಟಿದೆ.

ಬಿ. ಜೋಜೇಬ್ ಹುಕುಂ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.